> ಗಟ್ಟಿಯವರು ಮುವ್ವತ್ತು ವರ್ಷಗಳ ಹಿಂದೆ ಉಡುಪಿಯಲ್ಲಿದ್ದಾಗ ಒಂದು ಕನಸು ಕಂಡಿದ್ದರು. ಶಿಕ್ಷಣ ಮತ್ತು ಭಾಷಾ ಕಲಿಕೆಯ ಬಗ್ಗೆ ಅತೀವ ಆಸಕ್ತಿ, ಜ್ಞಾನ ಇದ್ದ, ಅಧ್ಯಾಪನ ವೃತ್ತಿಯ ಸುದೀರ್ಘ ಅನುಭವದ ಗಟ್ಟಿಯವರಿಗೆ ತಮ್ಮದೇ ಆದ ಒಂದು ಶಾಲೆ ಆರಂಭಿಸುವ ಕನಸಿತ್ತು. ಆದರೆ ಅವರ ಬಜೆಟ್‌ಗೆ ಮೀರಿದ ಕನಸಾಗಿತ್ತದು. ಹಾಗಾಗಿ ಅದನ್ನು ಕೈಬಿಟ್ಟು ಉಜಿರೆಯಲ್ಲಿ ಮನೆ ಖರೀದಿಸಿದರು. ಅದೂ ಎಂಥ ಮನೆ! ಒಂದೆರಡು ಸಾವು, ಮಾರಣಾಂತಿಕ ಕಾಯಿಲೆ ಎಲ್ಲ ಕಂಡು ಕಂಗಾಲಾದ ಆ ಮನೆ ಮಂದಿ ಅಲ್ಲಿ ಭೂತ ಪಿಶಾಚಿಗಳಿವೆ ಎಂದು ಅದನ್ನು ಮಾರಲು ಹೊರಟಿದ್ದರು! ಗಟ್ಟಿಯವರು ಕುಟುಂಬ ಸಮೇತ ಬಂದಾಗ ಕೆಲವರು ಅವರನ್ನೂ ಹೆದರಿಸಿದ್ದರಂತೆ, ಸ್ವಲ್ಪ ಜಾಗ್ರತೆ ಮಾರಾಯರೆ, ಅಲ್ಲೆಲ್ಲ ಭೂತ ಪಿಶಾಚಿಗಳಿವೆ ಎಂದು! ನಾನು ಎಲ್ಲ ತರದ ಭೂತ ಪಿಶಾಚಿಗಳನ್ನು ನೋಡಿಯೇ ಬಂದವನು ಇಲ್ಲಿಗೆ ಎಂದು ಮುಗುಳ್ನಗುತ್ತಾರೆ ಗಟ್ಟಿ!

ಬರುವುದಿಲ್ಲ, ಇರುವುದೇ ಇಲ್ಲ. ಹಾಗೆ ಈ ವಿಷಯದ ಬಗ್ಗೆ ನಾನು ಯೋಚನೆ ಮಾಡ್ಬೇಕ? ಅಥವಾ ಇದರ ಬಗ್ಗೆ ವಿಶ್ಲೇಷಣೆ ಮಾಡ್ಬೇಕಾ? ಬೇಡ! ಮುಗಿಯಿತು. ಬೇಡ. ಆ ತರದ ಒಂದು ಅಭ್ಯಾಸವನ್ನು ಬೆಳೆಸಿಕೊಂಡಿದ್ದೇನೆ ನಾನು. ಈಗಲೂ ಹಾಗೆ. ಬರವಣಿಗೆಗೆ ಬೇಕಾದ್ದನ್ನು ಮಾಡ್ತೇನೆ.

ಗಟ್ಟಿ ಅವರೊಂದಿಗಿನ ಮಾತು– ಕತೆ ಮುಗಿಯಲಿಲ್ಲ. ಅದು ಹಾಗೆ ಮುಗಿಯುವುದೂ ಅಲ್ಲ. ಮತ್ತೆ ಮತ್ತೆ ಮುಂದುವರಿಯುವುದು ಇದ್ದೇ ಇರುತ್ತದೆ. ಯಶೋದಮ್ಮನ ಕೈಯಡುಗೆಯ ರುಚಿಯೊಂದಿಗೇ ಉಜಿರೆ ಬಿಟ್ಟು ಊರು ಸೇರಿಕೊಂಡ ಮೇಲೆ ಮತ್ತೆ ಮತ್ತೆ ಅವೇ ಮಾತುಗಳು ಮನದಲ್ಲಿ, ನೆನೆದಲ್ಲಿ ಕಾಡುತ್ತಲೇ ಇವೆ. ಮಳೆ ನಿಂತು ಹೋದ ಮೇಲೂ ಹನಿಯೊಂದು ಜಾರಿದಂತೆ!

ಚಿತ್ರಗಳು: ಸಂದರ್ಶಕರವು


### ನರೇಂದ್ರ ಪೈ

ಸದಾ ಉತ್ತಮ ಸಾಹಿತ್ಯದ ಕಡೆ ತುಡಿಯುವ ನರೇಂದ್ರ ಪೈ ಮಂಗಳೂರಿನವರು. ಅಲ್ಲಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಪೈ ವಿಮರ್ಶಕ, ಕತೆಗಾರರಾಗಿ ಈಗಾಗಲೇ ಗುರುತಿಸಿಕೊಂಡಿದ್ದಾರೆ. ಸಮಕಾಲೀನ ಲೇಖಕರ ಮುಖ್ಯಕೃತಿಗಳ ಬಗ್ಗೆ ಬರೆದಿರುವ ಅವರ ಕಥಾಸಂಗ್ರಹ 'ಟಿಕ್ ಟಿಕ್ ಗೆಳೆಯ', 'ಕನಸುಗಳೇ ಮರಳಿ ಬನ್ನಿ'. ಅವರು, ಕತೆಗಾರ ಎಸ್. ದಿವಾಕರ್ ಅವರ ಸಾಹಿತ್ಯವನ್ನು ಪರಿಚಯಮಾಡಿಕೊಡುವ ವಾಚಿಕೆ 'ರೂಪರೂಪಗಳನು ದಾಟಿ' ಸಂಪಾದಿಸಿದ್ದಾರೆ.